# ಗಾಂಧಿನಗರದಲ್ಲಿ 'ಬಿಲ್ ಗೇಟ್ಸ್'

'ಕೆಟ್ಟು ಪಟ್ಟಣ ಸೇರು' ಎನ್ನುವ ಮಾತನ್ನು ನೆನಪಿಸುವಂತೆ ಹಳ್ಳಿಯಿಂದ ನಗರಕ್ಕೆ ಬರುವ ಹುಡುಗರ ಕಥೆ 'ಬಿಲ್ ಗೇಟ್ಸ್' ಚಿತ್ರದ್ದು. ಹಣ ಮಾಡುವ ಉದ್ದೇಶದಿಂದ ನಗರಕ್ಕೆ ಬರುವ ಈ ತರುಣರ ಬದುಕಿನಲ್ಲಿ ನಡೆಯುವ ಉಂಟಾಗುವ ಬದಲಾವಣೆಗಳ ಸ್ವಾರಸ್ಯಕರ ಕಥೆ ಚಿತ್ರದಲ್ಲಿ ಇದೆಯಂತೆ.

ಅಂದಹಾಗೆ 'ಮೈಕ್ರೊಸಾಫ್ಟ್'ನ ಬಿಲ್ ಗೇಟ್ಸ್ ಅವರಿಗೂ ಚಿತ್ರದ ಶೀರ್ಷಿಕೆಗೂ ಸಂಬಂಧವಿಲ್ಲ. ನಂಟು ಇರುವುದು ದುಡ್ಡು ಮಾಡಬೇಕು ಎನ್ನುವ ಕಥಾನಾಯಕರ ಆಕಾಂಕ್ಷೆಯಲ್ಲಷ್ಟೇ! ಶ್ರೀನಿವಾಸ್ ಚಿತ್ರದ ನಿರ್ದೇಶಕರು. ಸಹ ನಿರ್ದೇಶಕರಾಗಿ ಸಾಕಷ್ಟು ಚಿತ್ರಗಳಿಗೆ ಕೆಲಸ ಮಾಡಿರುವ ಅವರು, 'ಬಿಲ್ ಗೇಟ್ಸ್' ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ತಮ್ಮ ಚಿತ್ರವನ್ನು 'ಪಕ್ಕಾ ಮನರಂಜನಾತ್ಮಕ ಸಿನಿಮಾ' ಎಂದು ಉತ್ಸಾಹದಿಂದ ಬಣ್ಣಿಸುವ ಅವರು, 'ಇದು ಕೌಟುಂಬಿಕ ಚಿತ್ರವೂ ಹೌದು' ಎಂದು ಹೇಳಲು ಮರೆಯುವುದಿಲ್ಲ.

ಶಿಶಿರ ಶರ್ಮ 'ಬಿಲ್ ಗೇಟ್ಸ್' ಚಿತ್ರದ ಹುಡುಗರ ಗುಂಪಿನ ಮುಂದಾಳು. ಕಿರುತೆರೆಯ ಧಾರಾವಾಹಿಗಳ ಮೂಲಕ ಮನೆ ಮನೆ ತಲುಪಿರುವ ಶಿಶಿರ ಅವರಿಗೆ ಬೆಳ್ಳಿತೆರೆಗೆ ತಮ್ಮನ್ನು ಒಡ್ಡಿಕೊಂಡಿರುವ ಪುಲಕವಿದೆ. ನಾಯಕನಾಗಬೇಕು ಎನ್ನುವ ಅವರ ಆಸೆ 'ಬಿಲ್ ಗೇಟ್ಸ್' ಮೂಲಕ ನನಸಾಗುತ್ತಿದೆ. 'ತಮ್ಮ ಪಾತ್ರ ಸೊಗಸಾಗಿದೆ, ಹೀರೊ ಆಗಲು ಹೇಳಿ ಮಾಡಿಸಿದಂತಿದೆ' ಎನ್ನುವ ಖುಷಿ ಅವರದು.

ರಾಜೇಶ್ ತಿಲಕ್ ಛಾಯಾಗ್ರಹಣ, ನೋಬಿನ್ ಪಾಲ್ ಸಂಗೀತ ಇರುವ ಈ ಚಿತ್ರದ ತಾರಾಗಣದಲ್ಲಿ ಚಿಕ್ಕಣ್ಣ, ಕುರಿ ಪ್ರತಾಪ್, ರೋಜಾ, ಮೇಘನಾ ಅಪ್ಪಯ್ಯ, ಯತಿರಾಜ್ ಮುಂತಾರವರಿದ್ದಾರೆ.



# ಎಲ್ಲರ ಮುದ್ದಿನ 'ಬದ್ಮಾಶ್'



ವಿಭಿನ್ನ ಪಾತ್ರಗಳಲ್ಲಿ ನಟಿಸುವ ಮೂಲಕ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿರುವ ಪ್ರತಿಭಾವಂತ ನಟ ಧನಂಜಯ್. ಅವರ ನಟನೆಯ ಹೊಸ ಚಿತ್ರ 'ಬದ್ಮಾಶ್' ಈಗ ತೆರೆಕಾಣುವ ಹಂತದಲ್ಲಿದೆ. ದಸರೆಯ ವೇಳೆಗೆ ಚಿತ್ರಮಂದಿರಗಳಿಗೆ ಬರುವುದು 'ಬದ್ಮಾಶ್' ತಂಡದ ಉದ್ದೇಶ.

ವರ್ಚಸ್ವೀ ರಾಜಕಾರಣಿ ಹಾಗೂ ಬುದ್ಧಿವಂತ ತರುಣನೊಬ್ಬನ ನಡುವಣ ಕಣ್ಣಾಮುಚ್ಚಾಲೆಯ ಕಥೆ 'ಬದ್ಮಾಶ್' ಚಿತ್ರದ್ದು. ಪೊಲಿಟಿಕಲ್ ಥ್ರಿಲ್ಲರ್ ಎಂದು ಕರೆಯಬಹುದಾದ ಈ ಸಿನಿಮಾದ ನಿರ್ದೇಶನ ಆಕಾಶ್ ಶ್ರೀವತ್ಸ ಅವರದು. 'ಬದ್ಮಾಶ್' ಚಿತ್ರದ ಯಶಸ್ಸಿನ ಬಗ್ಗೆ ಅಪಾರ ಆತ್ಮವಿಶ್ವಾಸ ಹೊಂದಿರುವ ನಿರ್ದೇಶಕರು, ಈ ಚಿತ್ರ ಧನಂಜಯ್ ಅವರ ವರ್ಚಸ್ಸನ್ನು ಕೂಡ ಬದಲಿಸಲಿದೆ ಎನ್ನುವ ವಿಶ್ವಾಸ ಹೊಂದಿದ್ದಾರೆ.

ಜುದಾ ಸ್ಯಾಂಡಿ ಸಂಗೀತ ಸಂಯೋಜನೆಯ ಗೀತೆಗಳು ಈಗಾಗಲೇ ಜನಪ್ರಿಯತೆ ಗಳಿಸಿವೆ. 'ಮಾಯಾವಿ ಕನಸೇ' ಎನ್ನುವ ಗೀತೆಯಂತೂ ಆನ್‌ಲೈನ್‌ನಲ್ಲಿ ಸಾಕಷ್ಟು ಜನರ ಗಮನ ಸೆಳೆದದೆ. ಚಿತ್ರದ ಟ್ರೇಲರ್ ಕೂಡ ಸುದ್ದಿಮಾಡಿದೆ. ಈ ಟ್ರೇಲರ್ ನೋಡಿ ಪರಭಾಷಾ ಕಲಾವಿದರು–ತಂತ್ರಜ್ಞರು ಕೂಡ ಚಿತ್ರದ ಬಗ್ಗೆ ಕುತೂಹಲ ವ್ಯಕ್ತಪಡಿಸಿದ್ದಾರಂತೆ. ಹೀಗಾಗಿ 'ಬದ್ಮಾಶ್' ಪರಭಾಷೆಗಳಿಗೆ ರೀಮೇಕ್ ಆಗುವ ಸಾಧ್ಯತೆಗಳೂ ಇವೆ.

ಸಂಚಿತಾ ಶೆಟ್ಟಿ 'ಬದ್ಮಾಶ್'ನಲ್ಲಿ ಧನಂಜಯ್‌ಗೆ ಜೋಡಿಯಾಗಿ ನಟಿಸಿದ್ದಾರೆ. ಅಚ್ಯುತಕುಮಾರ್, ಜಹಾಂಗೀರ್, ರಮೇಶ್ ಭಟ್, ಬಿ. ಸುರೇಶ್, ಪ್ರಕಾಶ್ ಬೆಳವಾಡಿ, ವೈಜನಾಥ ಬಿರಾದಾರ್ ಹಾಗೂ ಸುಚೇಂದ್ರ ಪ್ರಸಾದ್ ತಾರಾಗಣದಲ್ಲಿರುವ ಪ್ರಮುಖರು.